**ದಿನಾಂಕ 18.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ**

**2 ರಿಂದ 4 ನೇ ಪ್ರತಿವಾದಿ ಪರ ಶ್ರೀ HLC ವಕೀಲರಿಂದ**

ನನ್ನ ಒಬ್ಬ ಸಹೋದರ ಇರುತ್ತಾನೆ. ನನ್ನ ತಂದೆಗೆ ಸಹೋದರಿಯರು ಇರುವುದಿಲ್ಲ. ನನಗೂ ಸಹೋದರಿಯರು ಇರುವುದಿಲ್ಲ. ನಮ್ಮ ಗ್ರಾಮದಲ್ಲಿ ಆಂಜನೇಯ್ಯ ಗುಡಿ ಇದ್ದು ಬೆನಕಲ್ ಗ್ರಾಮದಲ್ಲಿ ಅಣ್ಣ ಮಲೇಶ್ವರ ಗುಡಿ ಇದೆ ಎಂದರೆ ಸರಿ. ದಾವ ಆಸ್ತಿಗಳು ದೇವಾಲಯದ ಆಸ್ತಿಗಳು ಎಂದರೆ ಸರಿ. ಎರಡು ದೇವಾಲಯಗಳ ಪೂಜೆಯನ್ನು 2 ರಿಂದ 4 ನೇ ಪ್ರತಿವಾದಿಗಳು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದಿರಿ ದೇವಾಲಯಗಳ ಪೂಜೆಗಾಗಿ ವರ್ಷಕ್ಕೆ 82 ಸಾವಿರ ಸರಕಾರದಿಂದ ಬರುತ್ತದೆ ಎಂದು ನುಡಿಯುತ್ತಾರೆ. ದಾವ ಜಮೀನುಗಳ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ನನಗೆ ಸಹೋದರಿಯರು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಾಲಯಗಳ ಜಮೀನುಗಳು ದೇವಾಲಯಗಳ ಪೂಜಾರಿಕೆ ಮಾಡುವವರಿಗೆ ಸೇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವ ಜಮೀನುಗಳು ನಮ್ಮ ತಂದೆಯ ಕುಟುಂಬದ ಜಮೀನುಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ದಾವ ಜಮೀನುಗಳು ನಮ್ಮ ಕುಟುಂಬದ ಹಿರಿಯರ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಜಮೀನುಗಳು 2 ನೇ ಪ್ರತಿವಾದಿ ಹೆಸರಿಗೆ ಮುಟೇಶನ ಆಗಿ 20-25 ವರ್ಷ ಆಗಿರುತ್ತದೆ. ಇತ್ತಿಚೆಗೆ ಗಿರಿಜಮ್ಮ ಮತ್ತು ಜಗದೀಶ ಹೆಸರಿಗೆ ಮುಟೇಶನ ಆಗಿರುತ್ತವೆ ಎಂದು ನುಡಿಯುತ್ತಾರೆ. 20-25 ವರ್ಷಗಳಿಂದ ಹನುಮಂತರಾಯ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹನುಮಂತರಾಯ ನಿಮ್ಮ ಹೆಸರಿಗೆ ಮಾಡಿಸುತ್ತೇನೆ ಎಂದು ಹೇಳುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು 1 ನೇ ಪ್ರತಿವಾದಿ ನಾಗಪ್ಪ ದಾವ ಜಮೀನುಗಳಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ರಾಯಚೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ದೊಂಡಬ್ಬಳಿ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತೇನೆ. ಸಾಕ್ಷಿ ಮುಂದುವರೆದು ಮೊದಲು ಹನುಮಂತರಾಯ ಜಮೀನಿನಲ್ಲಿ ಬೆಳೆದ ಬೆಳೆಯಲ್ಲಿ ಭಾಗ ನೀಡುತ್ತಿದ್ದು ನಾನು ಜಮೀನಿನಲ್ಲಿ ಭಾಗ ಕೇಳಿದ್ದರಿಂದ ನನಗೆ ಬೆಳೆ ಕೊಡುವುದನ್ನು ನಿಲ್ಲಿಸಿರುತ್ತಾನೆ ಎಂದು ನುಡಿಯುತ್ತಾರೆ. 2022 ರಲ್ಲಿ ಭಾಗ ನೀಡುವಂತೆ ಪ್ರತಿವಾದಿಗಳನ್ನು ಕೇಳಿರುತ್ತೇನೆ. 2022 ರಲ್ಲಿ ಭಾಗ ನೀಡುವಂತೆ ಕೇಳಿದ ನಂತರ ಪುನಃ

ಭಾಗ ನೀಡುವಂತೆ ಕೇಳಿಲ್ಲ. ರಾಯಚೂರಿನಲ್ಲಿ ನಮಗೆ ಸೇರಿದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ವಾಸವಿದ್ದ ಮನೆ ಬಾಡಿಗೆ ಮನೆ ಆಗಿರುತ್ತದೆ. ವಾಸವಿದ್ದ ಮನೆ ಬಾಡಿಗೆ ಮನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಿಗೆ ನಾನು ಮತ್ತು 1 ನೇ ಪ್ರತಿವಾದಿ ಸಂಬಂಧ ಇರದೇ ಇದ್ದರೂ ಇಬ್ಬರು ಸೇರಿ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

OS No.91/2017
**PW-1**

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ</u>**

**<u>ದಿನಾಂಕ 17.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ AMP ವಕೀಲರಿಂದ</u>**

ನಾನು ಈ ದಾವೆಯನ್ನು ನನ್ನ ಮತ್ತು 1 ನೇ ಪ್ರತಿವಾದಿ ನಡುವೆ ಆದ ವಿಭಾಗದಲ್ಲಿ ಸಮನಾದ ವಿಭಾಗ ಆಗಿರವುದಿಲ್ಲವಾದ್ದರಿಂದ ನಾನು ಈ ದಾವೆಯನ್ನು ಸಮನಾದ ಭಾಗಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಾವೆಯಲ್ಲಿ 1 ನೇ ಪ್ರತಿವಾದಿಗೆ ಹೆಚ್ಚಿನ ಜಮೀನು ಭಾಗದಲ್ಲಿ ಹೋಗಿದ್ದು ನನಗೆ ಕಡಿಮೆ ಜಮೀನು ಬಂದಿರುತ್ತದೆ ಎಂದು ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ವಿಭಾಗದಲ್ಲಿ ನನಗೆ 3 ಎಕರೆ ಜಮೀನು ಬಂದಿತ್ತು. ಸಾಕ್ಷಿ ಮುಂದುವರೆದು ನನ್ನ ಮತ್ತು 1 ನೇ ಪ್ರತಿವಾದಿ ಶಿವಮ್ಮಳ ನಡುವೆ ಭಾಗ ಆಗಿರುವುದಿಲ್ಲ. ನನ್ನ ತಾಯಿ ಹೆಸರಿನಲ್ಲಿ ಇರುವ ಜಮೀನನ್ನು ಶಿವಮ್ಮ ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾಳೆ ಎಂದು ನುಡಿಯುತ್ತಾರೆ. ನಗೆ 3 ಎಕೆರ ಜಮೀನನ್ನು ನನ್ನ ತಂದೆಯೇ ನೀಡಿರುತ್ತಾರೆ. ನನ್ನ ತಂದೆಯ ಸಾಕು ಮಗಳಾದ ಬಸ್ಸಮ್ಮಳಿಗೆ 12 ಎಕೆರ ಜಮೀನು ಕೊಟ್ಟಿರುತ್ತಾನೆ. ಉಳಿದ ಜಮೀನನ್ನು 1 ನೇ ಪ್ರತಿವಾದಿ ಶಿವಮ್ಮ ಮತ್ತು ನನ್ನ ತಾಯಿ ಹೆಸರಿಗೆ ಮಾಡಿರುತ್ತಾನೆ. ನನ್ನ ತಂದೆ ಜೀವಂತ ಅವಧಿಯಲ್ಲಿ ವಿಭಾಗವಾಗಿದ್ದು ಸದರಿ ವಿಭಾಗದಲ್ಲಿ ನನಗೆ 3 ಎಕರೆ ಜಮೀನನ್ನು ಮತ್ತು 1 ನೇ ಪ್ರತಿವಾದಿ ಗಂಡನನ್ನು ಮನೆ ಅಳಿಯನಾಗಿ ಇಟ್ಟುಕೊಂಡಿದ್ದರಿಂದ ಬಸ್ಸಮ್ಮಳಿಗೆ 12 ಎಕರೆ ಕೊಟ್ಟು ನಂತರ ಉಳಿದ ಎಲ್ಲ ಜಮೀನನ್ನು 1 ನೇ ಪ್ರತಿವಾದಿ ಶಿವಮ್ಮಳಿಗೆ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ನನ್ನ ತಾತನ ಹೆಸರು ಅಳ್ಳಪ್ಪ ಹುಲಿಗುಡ್ಡ ಎಂದರೆ ಸರಿ. ನನ್ನ ತಾತನಿಗೆ ನನ್ನ ತಂದೆ ಒಬ್ಬನೇ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು ಅವರುಗಳು ಶಿವಣ್ಣ, ಗೌರಮ್ಮ ಮತ್ತು ಮರೆಮ್ಮ ಇದ್ದರು. ಗೌರಮ್ಮಳಿಗೆ ಒಬ್ಬ ಗಂಡು ಮಗ ಇಬ್ಬರು ಹೆಣ್ಣು ಮಕ್ಕಳು ಅವರುಗಳು ಹನುಮಯ್ಯ (ನನ್ನ ಅಕ್ಕಳ ಗಂಡ), ಭಾಗಮ್ಮ ಮತ್ತು ದ್ಯಾವಮ್ಮ ಇದ್ದರು. ಮರೆಮ್ಮಳಿಗೆ 3 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರುಗಳು ಶಿವಪ್ಪ, ಬಸವರಾಜ, ಸಿದ್ದಪ್ಪ, ಶಿವಮ್ಮ ಮತ್ತು ಸಿದ್ದಮ್ಮ ಇರುತ್ತಾರೆ. ಗೌರಮ್ಮ ಮತ್ತು ಮರೆಮ್ಮ ಈಗಾಗಲೇ ಮೃತಪಟ್ಟಿರುತ್ತಾರೆ. ಅವರ ಗಂಡಂದಿರು ಸಹ ಮೃತಪಟ್ಟಿರುತ್ತಾರೆ. ಗೌರಮ್ಮಳ 3 ಜನ ಮಕ್ಕಳು ಮೃತಪಟ್ಟಿರುತ್ತಾರೆ. ಮೃತ ಭಾಗಮ್ಮ ಮತ್ತು ದ್ಯಾವಮ್ಮ ಇವರ ಮಕ್ಕಳು ಜೀವಂತ ಇರುತ್ತಾರೆ. ಮರೆಮ್ಮಳ

3 ಜನ ಗಂಡು ಮಕ್ಕಳಲ್ಲಿ ಶಿವಪ್ಪ (PW 2) ಮಾತ್ರ ಜೀವಂತ ಇದ್ದು ಉಳಿದ ಇಬ್ಬರು ಗಂಡು ಮಕ್ಕಳು ಮೃತರಾಗಿರುತ್ತಾರೆ. ಮೃತ ಸಿದ್ದಪ್ಪ ಮತ್ತು ಬಸವರಾಜ ಇವರ ಹೆಂಡತಿಯರು ಮತ್ತು ಅವರ ಮಕ್ಕಳು ಜೀವಂತ ಇರುತ್ತಾರೆ. ಮರೆಮ್ಮಳ ಮಗಳು ಶಿವಮ್ಮ ಜೀವಂತ ಇರುತ್ತಾಳೆ ಮತ್ತು ಇನ್ನೊಬ್ಬ ಮಗಳು ಸಿದ್ದಮ್ಮ ಮತ್ತು ಅವಳ ಗಂಡ ಮೃತಪಟ್ಟಿದ್ದು ಅವಳ ಮಕ್ಕಳ ಜೀವಂತ ಇರುತ್ತಾರೆ. ಸದರಿ ಜೀವಂತ ಇದ್ದ ಮೃತರ ಮಕ್ಕಳ ಹೆಸರು ನೆನಪಿರುವುದಿಲ್ಲ.

ದಾವ ಆಸ್ತಿಗಳು ನನ್ನ ತಾತನ ಆಸ್ತಿಗಳು ಆಗಿದ್ದು ನನ್ನ ತಾತನಿಂದ ನನ್ನ ತಂದೆ ಶಿವಣ್ಣನಿಗೆ ಬಂದಿರುತ್ತವೆ ಎಂದರೆ ಸರಿ. ನನ್ನ ತಾತನ ಆಸ್ತಿಗಳಲ್ಲಿ ಆತನ 3 ಮಕ್ಕಳಿಗೆ ಭಾಗ ಇದೆ ಎಂದರೆ ಸರಿ. ಸದರಿ ನನ್ನ ತಾತನ ಇಬ್ಬರು ಹೆಣ್ಣು ಮಕ್ಕಳ ವಾರಸುದಾರರನ್ನು ನಾನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ನಾನು ನನ್ನ ತಾತನಿಂದ ನನ್ನ ತಂದೆಗೆ ಬಂದ 35 ಎಕರೆ ಜಮೀನು ಕುರಿತು ದಾವೆ ಸಲ್ಲಿಸಿಲ್ಲ ಕೇವಲ 2 ಜಮೀನುಗಳ ಕುರಿತು ಮಾತ್ರ ದಾವೆ ಸಲ್ಲಿಸಿರುತ್ತೇನೆ.

ನನ್ನ ಭಾಗಕ್ಕೆ ಬಂದ 3 ಎಕರೆಯನ್ನು ಯಾರಿಗೆ ಮಾರಾಟ ಮಾಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಮಾರಾಟ ಮಾಡಿರುವುದಿಲ್ಲ ನಾನು ಸತ್ತಿರುತ್ತೇನೆ ಎಂದು ನನ್ನ ತಂದೆಯ ಸಾಕು ಮಗಳಾದ ಬಸ್ಸಮ್ಮಳ ಮಕ್ಕಳು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಅ ಕುರಿತು ರಾಯಚೂರು ಡಿಸಿ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು 3 ಎಕರೆ ಜಮೀನನ್ನು ಮಾರಾಟ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಸಿ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸಮ್ಮಳ ಸಾಕು ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸಮ್ಮ ನನ್ನ ತಂದೆ ಶಿವಣ್ಣನ ಮಗಳು ಆಗಿರುತ್ತಾಳೆ ಎಂದರೆ ಸರಿಯಲ್ಲ. ನಾನು ನನ್ನ ಭಾಗದ ಜಮೀನನ್ನು ಪಡೆದಿದ್ದರಿಂದ ದಾವ ಜಮೀನುಗಳಲ್ಲಿ ನನಗೆ ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಶಿವಮ್ಮಳ ಹೆಸರಿನಲ್ಲಿ ಇರುವ ಜಮೀನುಗಳನ್ನು ಅವಳೇ ಸಾಗುವಳಿ ಮಾಡಿ ಅನುಭೋಗಿಸುತ್ತಿದ್ದಾಳೆ ಮತ್ತು ನನಗೆ ಯಾವುದೇ ಭಾಗದ ಬೆಳೆ ನೀಡಿರುವುದಿಲ್ಲ ಎಂದರೆ ಸರಿ. ಕಳೆದ 40 ವರ್ಷಗಳಿಂದ ನನಗೆ ಯಾವುದೇ ಬೆಳೆಗಳನ್ನು ನೀಡದೇ 1 ನೇ ಪ್ರತಿವಾದಿ ಜಮೀನುಗಳನ್ನು ಅನುಭೋಗಿಸುತ್ತಿದ್ದಾಳೆ ಎಂದರೆ ಸರಿ.

ನನ್ನ ಮಗನಿಗೆ ಮರಳು ವ್ಯವಹಾರ ಮಾಡಲು ಅವಕಾಶ ನೀಡದೇ ಇದುದ್ದರಿಂದ ಪ್ರತಿವಾದಿಗಳ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಸ್ವತ್ತು ಆಗಿದ್ದರಿಂದ ನನ್ನ ಮಗ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ಮರಳಿನ ಟೆಂಡರ್ ಪಡೆದಿರುತ್ತಾರೆ ಎಂದರೆ ನನಗೆ

ತಿಳಿಯದಂತೆ ಸಹಿ ಮಾಡಿಸಿಕೊಂಡು ಟೆಂಡರ ಮಾಡಿ ನನಗೆ ಯಾವುದೇ ಹಣ ನೀಡದೇ 40 ಲಕ್ಷ ಹಣವನ್ನು 1 ನೇ ಪ್ರತಿವಾದಿ ಪಡೆದಿರುತ್ತಾಳೆ ಎಂದು ನುಡಿಯುತ್ತಾರೆ. 40 ಲಕ್ಷ ಶಿವಮ್ಮ ಪಡೆದಿರುತ್ತಾಳೆ ಎಂದರೆ ಸರಿಯಲ್ಲ. ನಾನು ಕಳೆದ 40 ವರ್ಷಗಳಿಂದ ದಾವ ಆಸ್ತಿಯ ಅನುಭೋಗದಲ್ಲಿ ಇಲ್ಲದೇ ಇರುವುದರಿಂದ ಮತ್ತು ಶಿವಣ್ಣನ ಎಲ್ಲ ಆಸ್ತಿಗಳನ್ನು ದಾವೆಯಲ್ಲಿ ಸೇರಿಸದೇ ಇದುದ್ದರಿಂದ ಮತ್ತು ಅಳ್ಳಪ್ಪನ ಇಬ್ಬರು ಹೆಣುಣ ಮಕ್ಕಳ ವಾರಸುದಾರರನ್ನು ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆಯಲ್ಲಿ ನನಗೆ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. 40 ವರ್ಷಗಳಿಂದ ನಾನು ಶಿವಮ್ಮಳನ್ನು ಜಮೀನುಗಳಲ್ಲಿ ಬೆಳೆದ ಬೆಳೆಯಲ್ಲಿ ಭಾಗ ನೀಡುವಂತೆ ಕೇಳುತ್ತ ಬಂದಿದ್ದರೂ ಅವಳು ನನಗೆ ಭಾಗ ನೀಡಿಲ್ಲ ಎಂದರೆ ಸರಿ. 40 ವರ್ಷಗಳಿಂದ ನಾನು ಭಾಗ ಕೇಳಿದಾಗಲೆಲ್ಲ ಶಿವಮ್ಮ ನನಗೆ ಭಾಗ ಇಲ್ಲವೆಂದು ಹೇಳುತ್ತಾ ಬಂದಿರುತ್ತಾಳೆ ಎಂದರೆ ಸರಿಯಲ್ಲ. ಭಾಗ ನೀಡುವುದಿಲ್ಲ ಎಂದು ಹೇಳಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.